ಇರುವುದರಿಂದ, 75 ವರ್ಷಗಳ ಹಳೆಯದಾದಂಥ ಸೇತುವೆಯಲ್ಲಿ ಬಹಳ ದುರಸ್ಥಿಯಾಗಿದೆ ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ. ಇದಕ್ಕಾಗಿಯೇ ಕೇಂದ್ರ ಸರ್ಕಾರದವರು ರಾಷ್ಟ್ರೀಯ ಹೆದ್ದಾರಿ–209ನ್ನು Public-Private Participation (PPP) ಯೋಜನೆಯಡಿಯಲ್ಲಿ ತೆಗೆದುಕೊಳ್ಳುವಂಥ ಕಾರ್ಯಕ್ರಮವನ್ನು ಮಾಡಿದೆ. ಅತ್ಯಂತ ಶೀಘ್ರದಲ್ಲೇ ಯೋಜನೆಯನ್ನು ತಯಾರು ಮಾಡಿ, ಆ ಸೇತುವೆಯನ್ನು ನಿರ್ಮಾಣ ಮಾಡುವಂಥ ಕೆಲಸವಾಗುತ್ತದೆ. ಅಲ್ಲಿಯವರೆಗೆ ಅದರಲ್ಲಿ 10 ಟನ್‌ಗಿಂಥ ಹೆಚ್ಚು ಭಾರದ ವಾಹನಗಳನ್ನು ನಿಯಂತ್ರಣಗೊಳಿಸುವಂಥ ಕಾರ್ಯಕ್ರಮಗಳಿಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿ, ಆ ಕಾರ್ಯಕ್ರಮ ಜಾರಿಗೊಳಿಸುವಂತೆ ಮಾಡುತ್ತೇನೆ.

ಕೇಂದ್ರ ರಸ್ತೆ ನಿಧಿ ಬಗ್ಗೆ

65(315) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್‌ನಾಡಗೌಡ: (ಮುದ್ದೇಬಿಹಾಳ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಗೆ ಸಿ.ಆರ್.ಎಫ್. ಫಂಡ್‌ನಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ?

ಆ) ಮುದ್ದೇಬಿಹಾಳ ಮತಕ್ಷೇತ್ರಕ್ಕೆ ಸಿ.ಆರ್.ಎಫ್. ಫಂಡ್‌ನಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗಿದೆ?

ಇ) ಈ ಬಗ್ಗೆ ಸಕಾರದ ಮಾನದಂಡವೇನು?

ಈ) ಹಾಗಿದ್ದಲ್ಲಿ, ಸರ್ಕಾರ ಎಂದಿನಿಂದ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಬಿಜಾಪುರ ಜಿಲ್ಲಾ ವ್ಯಾಪ್ತಿಗೆ 2008–09ನೇ ಸಾಲಿನಲ್ಲಿ ಒಟ್ಟು 12 ಕಾಮಗಾರಿಗಳು ರೂ.14.70ಕೋಟಿ ಮೊತ್ತಕ್ಕೆ ಮಂಜೂರಾಗಿರುತ್ತದೆ.

ಆ) ಮುದ್ದೇಬಿಹಾಳ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹಿರೇಮೂರ–ಹುನಕುಂಟ ರಸ್ತೆಯ ಕಿ.ಮೀ.0.00ರಿಂದ 9.00ರವರೆಗೆ ಅಭಿವೃದ್ಧಿಪಡಿಸುವ ಒಂದು ಕಾಮಗಾರಿಯು ರೂ.100 ಲಕ್ಷಗಳಿಗೆ ಮಂಜೂರಾಗಿರುತ್ತದೆ.

ಇ) ಕೇಂದ್ರ ಭೂಸಾರಿಗೆ ಸಚಿವಾಲಯದ ಸಿ.ಆರ್.ಎಫ್. ನಿಯಮಾವಳಿಗಳ ಪ್ರಕಾರ ಅರ್ಹವಿರುವ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಅನುದಾನದ ಲಭ್ಯತೆ ಅನುಸರಿಸಿ ಕೇಂದ್ರ ಸರ್ಕಾರದಿಂದ ಅನುಮೋದನೆ ಆದ ಕಾಮಗಾರಿಗಳಿಗೆ ರಾಜ್ಯ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು (ಕೇಂದ್ರ ಸರ್ಕಾರದ ಸಿ.ಆರ್.ಎಫ್. ನಿಯಮಾವಳಿ ಪ್ರತಿಯನ್ನು ಲಗತ್ತಿಸಲಾಗಿದೆ).

ಈ) 2008–09 ಮೇ ಸಾಲಿನಲ್ಲಿ ಮಂಜೂರಾಗಿರುವ ಹಿರೇಮೂರ–ಹುನಕುಂಟ ರಸ್ತೆ ಅಭಿವೃದ್ಧಿ ಕಾಮಗಾರಿಯು ಈಗಾಗಲೇ ಪ್ರಾರಂಭಗೊಂಡಿದ್ದು, ಪ್ರಗತಿಯಲ್ಲಿರುತ್ತದೆ.

MINISTRY OF ROAD TRANSPORT AND HIGHWAYS

NOTIFICATION

New Delhi, the 10th July, 2007

G.S.R. 475(E).- In exercise of the power conferred by section 12 of the Central Road fund Act, 2000 (54 of 2000), the Central Government hereby makes the following rules of the disbursement of the Central Road Fund in respect of specified projects, schemes and activities relating to development and maintenance of State roadfs including roas of inter-State connectivity and economic importance, namely:-

1. Short title, and commencement.-(1) These rules may be called the Central Road Fund (State Roads) Rules, 2007.

(2) They shall come intoforce on the date of their publication in the Official Gazette.

2. Defination.-In these rules, unless the context otherwise requires.-

(a) "Act" Means the Central Road Fund Act, 2000 (54 of 2000);

(b) "executive agency" means-

(i) in the case of a Union territory, the Administrator thereof to whom the functions of the Central Government in relation to the execution of works pertaining no national highways are delegated under article 239 of the Constitution;and

(ii) in any other case, the State Government to which such functions are delegated under section 5 of the National Highways Act, 1956 (48 of 1956);

(c) "scheme" means the scheme for development of state roads of inter-State connectivity and economic importance and fincludes the schemes relating to development of State roads sanctioned under the Central Road Fund by the Resolution governing the Central Road Fund as passed by the Houses of Parliament, dated the 13th May, 1988;

(d) words and expressions' used herein and not defined but defined in the Act shall have the same meanings respectively assigned to them in Act.

3. Disbursement of Fund in respect of projects, schemes and activities.- Subject to the provisions specified under section 7 of the Act, the Fund shall be disbursed for projects, schemes or activities relating to the constructionand development of State roads including roads of inter-State connectivity and of economic importance but excluding the rural roads and to be identified in accordance with the rule 4 of these rules.

4. Procedure for identification and prioritization.- (1) The Central Government shall identify the projects, schemes activities for release of Funds in consultation with the State Governments or the Union territory Administrations, as the case may be.

(2) If, all the projects, schemes or activities so identified cannot be sanctioned due to shortage of resources in the Fund, the Central Government shall prioritise the projects, schemes or activities for release of Fund in consultation with the State Governments or Union territory Administrations, as the case may be.

(3) The State Governments or the Union terriotory Administrations, as the case may be, shall furnish necessary details as per rule 5 and rule 6 of the projects, schemes or activities to the Central Government to facilitate identification and prioritization of the schemes.

(4) The State Governments or the Union territory Administrations, while furnishing the details relating to projects, schemes or activities to the Central Government, shall observe the procedure as prescribed under rule 5 and rule 6 of these rules.

5. Approval of schemes under State roads.-(1) The approval of schemes relating to State roads shall be done in the following manner, namely:-

(a) for utilization of Fund, priority may be assigned to already sanctioned projects under the scheme and the accruals shall be utilized for new works to be sanctioned as specified in sub-rule (2);

(b) all State roads including State highways, major district roads and other roads of importance excluding rural roads.

(2) The types of works to be considered in this scheme shall comprise-

(i) construction of missing bridges, cross drainage works, rehabilitation of bridges, widening of two-lanes, strengthening of weak pavement sanctions;

(ii) engineering aspects of road safetyworks covering improvement of traffic junctions, road marking, signaling, construction of subways and over-bridges, construction of parking lay-byes, bus sheds and the like;

(iii) construction of by passes, parallel service roads along national highways or State highways, in built up areas in exceptional case; and

(iv) development of connecting roads to national highways from rural as well as to tourist important places.

(3) The proposals shall cover sufficient length of road and shall generally be covering at least ten kilometers length, unless the requirement for connecting two places is less than ten kilometers in so far as works mentioned in sub-rule(2) are concerned, and shall include only those works where land is available without any encumbrance.

(4) The executive agency shall make available the Central Government a list of projects to be taken up which shall be shown on the State road map indicating district boundaries, national highways, State highways, major district roads, ruralroads or other types of roads in different colours, in addition to the roads already approved under the fund.

(5) The projects shall be selected with a view to have a balanced development of the road network in the entire

State or the Union territory, as the case may be, and the proposals shall incluse the following particulars, namely:-

(i) name of the work and district(s);

(ii) index map showing the area and the proposed road or bridge or improvement works.

(iii) category of the road proposed to be improved whether the State highway ormajor district road or otherwise;

(iv) scope of the work including the specifications to be adopted in brief;

(v) length;

(vi) estimated cost of the project based on the actual requirement and realistic cost estimate;

(vii) probable starting date;

(viii) target date of completion;

(ix) a certificate regarding availability of the entire unencumbered land needed for the project.

(6) The estimate for land acquisition shall not be considered under the Fund.

(7) The standards, design and specification of the works to be proposed shall follow the relevant guidelines, codes,Indian Road Congress specifications as directed by the Central Government and the period of completion of projects shallnot exceed twenty four months including period for tendering of projects.

(8) The Central Government shall accord administrative approval for the proposals as mentioned insub-rule(4) and sub-rule (5) above and the technical approval and

financial sanction of the proposals shall be accorded by the executive agency.

(9) No excess cost beyond ten per cent of the amount administratively for the proposal shall be permissible and the excess, if any, over and above ten per cent. Shall be arranged by the executive agency from their own resources.

(10) No revised estimate will be considered by the Central Government.

(11) the estimate for each workshall include provisions forcontingencies at the rate of 3%, quality control at the rate of 1% and workcharged establishment at the rate of 1.5% subject to the condition that out of these provisions, funds to the extant of 3% of the cost of the work shall be placed at the disposal of the regional officer appointed by the Central Government or any other officer authorized for the State or Union territory for incurring expenditure on hiring manpower and execution of quality control of the works.

(12) No agency charges shall be payable for the execution of works under the scheme.

(13) Maintenance and upkeep of the projects after completion shall be the responsibility of the executive agency.

(14) The executive agency shall ensure that an individual project is technically approved. Financially sanctioned and awarded within a period of four months from the date of administrative approval of work, failing which the work shall deemed to have been de-sanctioned.

(15) The sanctioned works shall be completed within the time schedule as submitted along with the particulars referred to in sub-rule(5).

(16) The accounts of the Fund shallbe audited by the Comptroller and Auditor General of India, in such manner and at such intervals, as may be specified by him.

(17) The executive agency shall furnish the utilization certificate in Form-1 duly verified by the regional officer appointed by the Central Government for the State or the Union territory along with the quarterly progress, report based on which further installment of Funds shall be released to the extent of expenditure incurred and the physical progress of the work:

Provided that, the total amount so released during any fiancial year shall not exceed the amount accured to the State or Union territory during that financial year and the amount which has not been released form accruals of the previous years.

(18) The total cost of the schemes to be approved shall be limited to the **bank of sanctions** which shall not normally exceed, at any point of time, two times the annual accrual for the year in which the schemes are sanctioned in respect of any State or Union territory.

6. Release of funds for State roads.-(1) one third of the accrual for the current year for each State or Union territory shall be placed at thedisposal of the concerned State or Union territory for utilization against the sanctioned works and the said amount shal be maintained as a reserve by replemnishing the expenditure from subsequent release:

Provided that the subsequent instalments shall be released on the basis of the progress of works and actual expenditure subject to the condition that the total amount released for any State or Union territory during the year shall not exceed the total accrual for that year in respect of that State or Union territory and the amount which as not been released from accruals of previous years.

(2) the executive agency shall submit the utilization certificate for the amount released and shall also submit quarterly progress report and monthly expenditure report annexed to these rules.

7. Manner of sanctioning schemes for construction and development of State roads including roads of inter-State connectivity and economic importance.- (1) the inter State roads or bridges at the border on State highway and major district roads necessary for ensuring through communication between two adjacent States shall be considered as the project of inter-State connectivity and shall be considered on the basis of the following guidelines, namely:-

(i) The proposed road should facilitate inter-State connectivity between States;

(ii) A bridges project on the border roads may be given priority;

(iii) No improvement work should have been done in last three years on such road;

(iv) The estimated cost of the proposed project shall not normally exceed rupees twenty-five crores unless permitted by the Central Government.

(2) The following projects on State highways and major district roads shall be Considered as the projects of economic

importance and shall be considered on the basis of the following guidelines, namely:-

(i) The proposed road should be either directly connecting to or leading to an important market centre, economic zone, industrial zone, agricultural region, tourist centre, religious centre and the like where significant economic activity is being undertaken;

(ii) Roads benefiting vulnerable sections of the society, such as, scheduled castes, scheduled tribes, ghat roads and roads connecting ecologically sensitive areas;

(iii) Roads leading to centre of economic activities, schools and education institutions;

(iv) Roads leding to socially important infrastructure, such as, cremation grounds, bathing ghats, orphanages, old age homes and public utilities;

(v) Roads connecting the State highways, the national highways and link roads connecting the tourist destinations.

(3) The estimate for each work shall include provisions for contingencies at the rate of 3%, quality control at the rate of 1% and workcharged establishment at the rate of 1.5% subject to the condition that out of these provisions, funds to the extant of 3% of the cost of the work shall be placed at the disposalof the regional officer appointed by the Central Government or any other authorised for the State or Union terrioryfor incurring expenditure on hiring manpower and execution of quality control of the works.

(4) Where the improvement work has been done in last three years in respect of any roads referred in sub-rule (2), such roads are not eligible to be considered for sanctioning of funds under these rules.

(5) The cost of the proposed projects shall not normally exceed rupees twenty crores unless permitted by the Central Government.

(6) The schemes under State roads of Inter-State connectivity and State roads of economic important shall be covered to the extent of-

(a) Ten percent. Of the allocation of State roads;

(b) Roads of bridge projects of inter-State connectivity shall be fully funded from the Fund;

(c) projects of economic importance shall be funded by the Fund to the extent of fifty percent. Of the approved project cost.,

(7) The executive agency shall, by 30th April of each year, furnish separate lists containing limited number of road and bridge projects of inter-State connectivity and economic importance which it would like to sponsor for sanction along with relevant details and justification.

(8) The executive agency shall not sponsor any proposal involving land acquisition and shifting of utilities.

8. Approval and financing of schemes.- (1) Particulars regarding the projects referred to in rule 6 shall be examined by the Central Government and the executive agency shall be informed of the projects identified for sanction under the scheme of State roads of inter State connectivity and economic importance.

(2) After selection of the scheme, the executive agency concerned shall submit the detailed estimates for all the road and bridge projects of either inter-State connectivity (fully financed) or economic importance (fifty per cent. Financed) and thereafter the Central Government shall accord technical, financial sanction and administrative approval subject to the condition that the existing procedure and guidelines applicable for the national highways projects with regard to framing and processing of the estimates shall be applicable to the projects sanctioned under this scheme.

(3) The executive agency shall tender a certificate to the effect that land is available for road development and is in its possession and removing of utilities, if any, has been comleted.

(4) Permissible limit of excess expenditure beyond sanctioned cost on projects fully financed under this scheme of inter-State connectivity shall be the same as applicable to national highway projects.

(5) For the projects sanctioned under economic importance, any excess amount over and above the sanctioned amount shall be borne by the executive agency from their own resources.

(6) No expenditure beyond permissible limits for fully financed projects shall be committed without obtaining the previous approval of the Central Government.

(7) Revision of estimate shall not be permissible under projects of economic importance category for partially financed works.

(8). The revised estimate for inter-State connectivity projects may be submitted to the Central Government for consideration, if the cost is likely to exceed beyond the permissible limits on the sanctioned cost.

(9) The existing instructions or guidelines in respect of tenders (pre-qualification and acceptance) and revised estimates as applicable to national highway projects shall be applicable to fully financed projects of roads of inter-State connectivity.

(10) Future upkeep and maintenance of the roads or bridges after completion shall be the responsibility of the concerned executive agency.

9. Release of funds for inter-State connectivity or economic importance works.-(1) The funds would be released in every financial year in instalments.

(2) (i) the first instalment shall be released on the basis of requirements communicated by the executive agency and the quantum of that instalment shall be regulated in accordance with the phasing of expenditure for the first of the project indicated in the Government sanction.

(ii) the subsequent instalment shall be released on the basis of the progress of the work and the actual expenditure and for that purpose, the executive agency shall submit the physical and financial progress reports to the Central Government in Form-I and Form-II, annexed to these rules, duly verified by the regional officer appointed by the Central Government for the State or Union territory.

(3) The release of funds fifty percent, financed works shall be commensurate with the expenditure proposed to be incurred from the resources of the States or the Union territories, as the case may be.

(4) In all these cases, the overall availability of budget provision shall be thedetermining factor for allocations and the payments would be regulated accordingly. The expenditure by

the concerned executive agency shall be confined to the allocation made for the work.

10. Execution of works.-(1) The executive agency shall, for the implementation of all the projects sanctioned under the Fund including inter-State connectivity and economic importance works, observe that-

(a) the design of the road or bridge projects shall be carried out as per the relevant Central Government codes and guidelines;

(b) for quality control of the works, authorised procedures prescribed by the Central Government shall be followed;

(c) project monitoring shall be done at regular interval in a methodical manner to avoid time and cost over run.

(2) The executive agency shall install signs at both ends of the projects displaying the name of work and other details as per instructions issued by the Central Government from time to time.

(3) The Central Government or any officer appointed by it as regional officer for the State or Union territory or any other officer or agency authorized by it shall periodically inspect the work during the execution and exercise such cheks as may be necessary to ensure observance of the time schedule and proper implementation:

Providing that no person, other than a civil engineer having a minimum qualification of Diploma in Civil Engineering and possessing a minimum of ten years experience in the construction and maintenance of roads, bridges or related infrastructure shall be authorized to inspect the works.

(4) The officer so authorized shall also measures the work to an extant not less than 30% of the value of the work to ensure execution of the work as per standards and specifications.

(5) The periodicity, intervals or the procedure for such inspection and exercising of checks shall be decided by the Central Government.

11. Progress reports and review.- (1) In the case of State roads other than inter-State connectivity and economic importance, the executive agency shall submit quarterly progress report of all the works sanctioned from the Fund for the quarters ending June, September, December and March every year and such report shall reach the Central Government within one month from the date of ending of each quarter, and the executive agency shall send completion report or certificate duly verified by the audit as soon as the works are comleted.

(2) In the case of State roads of inter-State connectivity and economic importance, the quarterly progress report and the monthly expenditure report shal be submitted to the Central Government in Form-II and Form-III with copies endorsed tosuch other officer as directed by it by the concerned chief engineer of the executive agency.

(3) The physical progress as well as expenditure shall be reviewed and discussed with executive on quarterly basis by the Central Government.

Form-I

[See rule 5(18)]

UTILISATION CERTIFICATE

It is to certify that out of an amount of

Rs.....crores/lakhs released by the Ministry of Shipping,

Road Transport and Highways, vide letter No.....dated....., an amount of Rs.....crores/lakhs has been spent on works sanctioned under the Central Road Fund scheme. It is further certified that expenditure has been incurred on sanctioned works only and has not exceeded the sanctioned cost of individual works.

Deputy Secretary/Joint Secretary/Secretary
Government of.....

FORM-II

Progress Report of Works Executed from Central Road Fund
Report for the Quarter Ending.....

Sl. No.	Name of the Work	Length (Km.) /M (For Bridges)	Amount of AA (Rs.in lakh)	A A No. and date	Amount of Technical Sanction	Date of Sanction	Physical progress in %		
							Upto theend of Previous Year	During the Year	Total Progress upto the end of the Quarter
1	2	3	4	5	6	7	8	9	10

Signature

Executive Engineer of the PWD

Form-III

Expenditure Report of Works Executed from Central Road Fund

State: Month:

Head of Account of which the expenditure is debitable:

Sl. No.	Name of the Project, À	Job No.	Amount of central assistance approved for the work	Progressive total of funds released upto end of the previous financial year	Total expenditure incurred against the work upto the end of previous financial year	Expenditure from 1st April of the year under report to the end of the previous month	Expenditure during the month the month to which the return relates	Total of Columns 5, 6 and 7	Remarks (if any)

						h			
1	2	3	4	5	6	7	8	9	10

[F.No.NH/11011/2/2000-P&M]

SAROJ KUMAR DASH, Jt.Secy.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡ(ಮುದ್ದೇಬಿಹಾಳ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನೀಡಿದ್ದಾರೆ. ಯಾವ ರೀತಿ ಇದನ್ನು ಕೈಗೊಳ್ಳಬಹುದು ಎಂದು Ministry of Road Transport and Highways – Notification copy ಕೂಡ ಇದರಲ್ಲಿ ಲಗತ್ತಿಸಲಾಗಿದೆ. ಅದರಲ್ಲಿ ನಾನು ಒಂದು ಅಂಶವನ್ನು ಓದಲು ಇಚ್ಛೆಪಡುತ್ತೇನೆ. ಇದೇ ನನ್ನ ಉಪ ಪ್ರಶ್ನೆ. "The proposals shall cover sufficient lengthof road and shall generally be covering at least 10 kms. Length unless the requirement for connecting the two places is less than 10 k.ms in so far as the works mentioned in sub rule (2) are concerned and shall include only those works where the land is available without any encumbrance". ಅಂದರೆ ಕೊನೆಯ ಪಕ್ಷ 10 ಕಿಲೋಮೀಟರ್ ರಸ್ತೆಯಾದರೂ ಕೈಗೊಳ್ಳಬೇಕು ಮತ್ತು connectivity establish ಆಗಬೇಕು. ಅದು 4 ಕಿಲೋಮೀಟರ್ ರಸ್ತೆಯೇ ಇರಲಿ ಆದರೆ connectivity establish ಆಗಬೇಕು. ಆದರೆ ತಾವು ಈಗ ಏನು ಕೆಲಸ ಕೈಗೊಳ್ಳುತ್ತಿದ್ದೀರಿ ಅದನ್ನು ತಾಲ್ಲೂಕುವಾರು ಹಂಚಿಕೆ ಮಾಡುತ್ತಿಲ್ಲ. ತಾಲ್ಲೂಕುವಾರು ಹಂಚಿಕೆ need based ಆಗುತ್ತಿಲ್ಲ. ಇಲ್ಲಿ ಸಬ್‌ಕಮಿಟಿಯಲ್ಲಿ ಯಾವ ರೀತಿಯಾಗಿ ತೀರ್ಮಾನ ತೆಗೆದುಕೊಳ್ಳುತ್ತೀರೋ ನನಗೆ ಗೊತ್ತಿಲ್ಲ. ಅದನ್ನು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೀರಿ, ಕೇಂದ್ರ ಸರ್ಕಾರದವರು ತಮಗೆ ಮಂಜೂರಾತಿ ಕಳುಹಿಸುತ್ತಾರೆ. ಹೀಗಾಗಿ ಎಲ್ಲೂ ಸಮರ್ಪಕವಾಗಿ ಕೆಲಸವಾಗುತ್ತಿಲ್ಲ. ಇದನ್ನು ಮೊದಲು ನಿಲ್ಲಿಸಬೇಕು. ಅದು ಮುದ್ದೇಬಿಹಾಳ, ತುರುವೇಕೆರೆ, ಚಿತ್ರದುರ್ಗ ಅಥವಾ ಇನ್ನೂ ಯಾವುದೋ ಮೂಲೆಯದ್ದು ಆಗಿರಬಹುದು. ಮೊದಲು need based ಆಗಬೇಕು. Most backward

districts and taluks ಆಗಿರಬಹುದು, ಎಲ್ಲಿ ಕೆಲಸ ಅತೀ ಜರೂರು ಇದೆ, ಇಲ್ಲಿ ನಮ್ಮ transportation needs ಗೆ facilitate ಮಾಡಬೇಕು, ಅಂಥ ರಸ್ತೆಗಳನ್ನು ಕೈಗೊಳ್ಳಬೇಕು. ಅದನ್ನು ಬಿಟ್ಟು ಒತ್ತಡಗಳಿಗೆ yield ಆಗಿ ಮಾಡುತ್ತಾ ಹೋದರೆ ಹೇಗೆ? ಕಳೆದ 7 ವರ್ಷಗಳಿಂದ ಮುದ್ದೇಬಿಹಾಳದಲ್ಲಿ ಒಂದು ರಸ್ತೆಯನ್ನೂ ಸುಧಾರಣೆ ಮಾಡಲು ಆಗುತ್ತಿಲ್ಲ. Link between narayanpur and Almatti Dam 44 ಕಿಲೋಮೀಟರ್ ರಸ್ತೆ ಇವತ್ತು ಹೋಗಲು ಆಗುತ್ತಿಲ್ಲ. Tourism spot ಹಾಗೂ ಮುಖ್ಯ ರಸ್ತೆ ಅದು. ನಾವು ಯಾವುದೇ ಯೋಜನೆಯಲ್ಲೂ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಇದು ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ದಯವಿಟ್ಟು ಈ ತಾರತಮ್ಯವೇನಿದೆ ನಿಲ್ಲಿಸಬೆಕು. ಇದನ್ನು ಸರ್ಕಾರ ನಿಲ್ಲಿಸುತ್ತದೆಯೋ ಇಲ್ಲವೋ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಕೇಂದ್ರ ಸರ್ಕಾರ ಕೂಡ ಈ ಗೈಡ್‌ಲೈನ್ಸ್‌ನ್ನು ಮಾರ್ಪಾಟು ಮಾಡಿ ಹೊಸ ಆದೇಶವನ್ನು ಹೊರಡಿಸಿದೆಯೇ? ಈ ಎರಡು ಪ್ರಶ್ನೆಗಳಿಗೆ ತಾವು ಉತ್ತರವನ್ನು ನೀಡಬೇಕು.

ಶ್ರೀ ಸಿ ಎಂ ಉದಾಸಿ (ಲೋಕೋಪಯೋಗಿ ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತಿದೆ. ಆದರೆ, ಮಾರ್ಗಸೂಚಿಯಲ್ಲಿರುವ ಪ್ರಸ್ತಾವನೆಯ ಅನ್ವಯ ನಾವು 10 ಕಿಲೋಮೀಟರ್‌ವರೆಗಿನ ರಸ್ತೆಗಳನ್ನು ಕಳುಹಿಸಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಆದನ್ನು ಮಾಡುವಂಥ ಪ್ರಯತ್ನವನ್ನೂ ಮಾಡುತ್ತೇವೆ. ಆದರೆ, ಅನೇಕ ಸಂದರ್ಭದಲ್ಲಿ ಅಲ್ಲಿಯ ಅವಶ್ಯಕತೆಯ ಅನುಗುಣವಾಗಿ ಒತ್ತಡ ಶಾಸಕರಿಂದ, ಲೋಕಸಭಾ ಸದಸ್ಯರಿಂದ ಬಂದಾಗ ಕಡಿಮೆ ಇರತಕ್ಕದ್ದನ್ನೂ ಮಾಡಿರುವುದು ಇದೆ. ನೀವು ಹೇಳಿದಂತೆ ಅದರಲ್ಲಿ ಸ್ಪಷ್ಟವಾಗಿ ಹತ್ತು ಕಿಲೋಮೀಟರ್‌ಗಿಂತ ಕಡಿಮೆ ಆಗಿರಬಾರದು, ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡಿರಬೇಕು ಮತ್ತು connectivity ಗೆ ಸಂಬಂಧ ಇರಬೇಕು ಎಂದು ಬರೆದಿದ್ದಾರೆ. ನಾವು ಕಳಿಸಬೇಕಾಗಿರುವ ಎಲ್ಲಾ ಪ್ರಸ್ತಾವನೆಗಳಿಗೂ ಈಗ ಮಂಜೂರಾತಿಯನ್ನು ಕೊಡುವಾಗ ಅಧಿಕಾರವನ್ನು ಕೇಂದ್ರ ಸರ್ಕಾರದವರು ತಮ್ಮ ವ್ಯಾಪ್ತಿಯಲ್ಲಿ ತೆಗೆದುಕೊಂಡಿರುವ ಒಂದು ತಿದ್ದುಪಡಿ ಆದೇಶ ಈಗ ನನ್ನ ಕೈಸೇರಿದೆ. ತಮಗೆ ಉತ್ತರ ಕಳುಹಿಸುವ ಪೂರ್ವದಲ್ಲಿ ಇದು ಸಿಕ್ಕಿರಲಿಲ್ಲ. ಮಾರ್ಚ್ 2010ಕ್ಕೆ

ಕೇಂದ್ರ ಸರ್ಕಾರದವರು ಮತ್ತೊಂದು ಸುತ್ತೋಲೆಯನ್ನು ಹೊರಡಿಸಿ upon a prioritization of the schemes and finalization of the same may by the standing committee headed by the Secretary, RT & H ಎಂದು ಬರೆದಿದ್ದಾರೆ. Government of India, Union Territory ಅವರು RTH ಅವರು finalize ಮಾಡುವುದು ಎಂಬ ಅರ್ಥದಲ್ಲಿ ಬರೆದಿದ್ದಾರೆ. ಇದು ದೌರ್ಭಾಗ್ಯ.. ಇದು ಆಗಬಾರದಿತ್ತು. ಮಾನ್ಯ ಕೇಂದ್ರ ಸಚಿವರು ಕರೆದಿದ್ದಂಥ ಸಭೆಯಲ್ಲಿ ನಾನು ಮತ್ತು ಕೇರಳದ ಲೋಕೋಪಯೋಗಿ ಸಚಿವರು ರಾಜ್ಯ ಸರ್ಕಾರಗಳು ಕಳುಹಿಸಿರುವಂಥ ಪ್ರಸ್ತಾವನೆಗೆ ಮನ್ನಣೆ ಇರಬೇಕು ಎಂದು ಪ್ರಸ್ತಾಪ ಮಾಡಿದ್ದೇವೆ. ಈ ರೀತಿ ತಿದ್ದುಪಡಿಯಾಗಿರುವುದರಿಂದ ಮತ್ತೊಮ್ಮೆ ಎಲ್ಲಾ ರಾಜ್ಯಗಳ ಲೋಕೋಪಯೋಗಿ ಸಚಿವರ ಸಭೆಯನ್ನು ಕರೆದಾಗ ಮಾನ್ಯ ಕೇಂದ್ರ ಸಚಿವರ ಗಮನಕ್ಕೆ ಇದನ್ನು ತರುವ ಕೆಲಸವನ್ನು ತಂದು ಇದನ್ನು ತಿದ್ದುಪಡಿ ಮಾಡುವ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಸಚಿವರು ಕೇಂದ್ರ ಸರ್ಕಾರದಿಂದ ಹೊರಡಿಸಿರುವ ಸುತ್ತೋಲೆಯ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ, ಆ ಅಸಮಾಧಾನದ ಹೊಗೆಯಾಡಿದ್ದು ಬಹುಶ: ಕರ್ನಾಟಕ ಹಾವೇರಿ ಕ್ಷೇತ್ರದಿಂದಲೇ ಪ್ರಾರಂಭವಾಯಿತೇ? ಕಳೆದ ಎರಡು ವರ್ಷದಲ್ಲಿ ಹಾವೇರಿ ಕ್ಷೇತ್ರಕ್ಕೆ ಸಿ.ಆರ್.ಎಫ್. ನಲ್ಲಿ ಕೊಟ್ಟಿರುವಷ್ಟು ಹಣವನ್ನು ಮುದ್ದೇಬಿಹಾಳಕ್ಕೆ ಕೊಟ್ಟಿಲ್ಲ. ಆ ಕಾರಣಕ್ಕೋಸ್ಕರವಾದರೂ ಕೇಂದ್ರ ಸರ್ಕಾರದವರು ಆ ತೀರ್ಮಾನವನ್ನು ತೆಗೆದುಕೊಂಡರೇ?

ಶ್ರೀ ಸಿ ಎಂ ಉದಾಸಿ: ಮಾನ್ಯ ಜಯಚಂದ್ರರವರು ನಾನು ಹೇಳಿದ್ದನ್ನು ಅನರ್ಥ ಮಾಡಿಕೊಳ್ಳಲು ಹೋದರು. ನೀವು ಅದನ್ನು ಅರ್ಥ ಕೋಶದಲ್ಲಿ ನೋಡಬೇಕೇ ಹೊರತು ಅನರ್ಥ ಕೋಶದಲ್ಲಿ ನೋಡುವುದಲ್ಲ. ನಾನು ಇಲ್ಲಿ ಹೇಳಿದ್ದೇನೆಂದರೆ finalization ಮಾಡುವಾಗ ನಾವು ಕಳುಹಿಸಿರುವುದರಲ್ಲಿ pick and choose ಮಾಡುತ್ತಿದ್ದಾರೆ. ಅದು ಅವರ ಅನುಭವಕ್ಕೂ ಬಂದಿದೆ. ಆ ವಿವರವನ್ನು ಇಲ್ಲಿ ಪ್ರಸ್ತಾಪ ಮಾಡುವುದು ಬೇಡ. ನಮಗೆ 120–130 ಕೋಟಿಗಿಂತ ಹೆಚ್ಚು ಹಣ ಸಿ.ಆರ್.ಎಫ್.ನಲ್ಲಿ ಸಿಗುವುದಿಲ್ಲ. ಒಂದು ವರ್ಷಕ್ಕೆ ತೆರಿಗೆಯಲ್ಲಿ

ಲಭ್ಯವಾಗಿರುವ ಹಣದಲ್ಲಿ ಶೇಕಡ ಒಂದನೇ ಮೂರರಷ್ಟು ಹಣವೆಂದರೆ ನಮಗೆ 120–130 ಕೋಟಿ ಹಣ ಮಾತ್ರ ಅದರಲ್ಲಿ ಲಭ್ಯವಾಗುತ್ತದೆ. ಆ 130 ಕೋಟಿ ಹಣದಲ್ಲಿ ಎಲ್ಲಾ ವಿಧಾನಸಭಾ ಕ್ಷೇತ್ರಕ್ಕೂ ಏಕ ಕಾಲದಲ್ಲಿ ಕೊಡಲು ಆಗುವುದಿಲ್ಲ. ಒಂದು ಸಲ ಈ ತಾಲ್ಲೂಕಿಗೆ ಕೊಟ್ಟರೆ ಮತ್ತೊಂದು ಸಹ ಇನ್ನೊಂದು ತಾಲ್ಲೂಕಿಗೆ ಕೊಟ್ಟಿರಬಹುದು. ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವೇ ತಾಲ್ಲೂಕಿಗೆ ಆಗಿದೆ ಎಂಬ ಬಗ್ಗೆ ದೂರುಗಳು ಬಂದಿರುವುದನ್ನು ಗಮನಿಸಿದ್ದೇವೆ. ಕಳೆದ ಸಭೆಯಲ್ಲಿ ರಾಜ್ಯ ಸರ್ಕಾರ ಕಳುಹಿಸಿರುವುದನ್ನೇ ಗುರಿ ಇಟ್ಟುಕೊಂಡು ಮಾಡಿಯೆಂದು ಅವರಿ ಹೇಳಿದ್ದೇವೆ. ಆದರೆ ಅವರು pick and choose ಮಾಡಲು ಹೊರಡಿದ್ದಾರೆ. ಇದು ಆಗಬಾರದು ಎಂಬ ಉದ್ದೇಶದಿಂದ ಇದನ್ನು ಹೇಳೀದ್ದೇನೆಯೇ ಹೊರತು ಕೇಂದ್ರ ಸರ್ಕಾರದ ಮೇಲ ದೋಷಾರೋಪಣೆ ಮಾಡುವ ಉದ್ದೇಶದಿಂದ ಇಲ್ಲಿ ಸಮಸ್ಯೆಯಾಗುತ್ತದೆ. ಇಲ್ಲಿ ಲಭ್ಯತೆಯನ್ನು ಅಧಾರವಾಗಿ ಇಟ್ಟುಕೊಂಡು ಮಾಡಲಿ ಎಂದು ಮಾತ್ರ ಹೇಳಿದ್ದೇನೆ.

ಶ್ರೀ ಸಿ ಎಸ್ ನಾಡಗೌಡ(ಅಪ್ಪಾಜಿ): ಸಿಆರ್ಎಫ್ ನಿಂದ ಕೆಲಸ ಕೈಗೊಳ್ಳಲು ಆಗುತ್ತಿಲ್ಲ, ಆದರೂ ತಮ್ಮ ಹತ್ತಿರ backward ರಸ್ತೆಗಳು ಎಲ್ಲಿದೆ, ಯಾವ ರಸ್ತೆಗಳನ್ನು ಸುಧಾರಣೆ ಮಾಡಬೇಕಾಗಿದೆ, traffic intensity ಏನಿದೆ ಎಂಬ ಬಗ್ಗೆ ಪೂರ್ಣ ಮಾಹಿತಿ ಇದೆ. ಸಿಆರ್ಎಫ್ ನಲ್ಲಿ ಅದು ಬಾರದಿದ್ದಾಗ ರಾಜ್ಯ ವಲಯದಿಂದ ಏನಾದರೂ ಕೈಗೆತ್ತಿಕೊಳ್ಳುವ ಪ್ರಯತ್ನ ಮಾಡುತ್ತೀರಾ?

ಶ್ರೀ ಸಿ ಎಂ ಉದಾಸಿ: ಹಣಕಾಸಿನ ಲಭ್ಯತೆಯ ಮೇಲೆ, ಅವಶ್ಯಕತೆಯನ್ನು ಗಮನದಲ್ಲಿ ಇಟ್ಟುಕೊಂಡು ಪ್ರಥಮ ಆದ್ಯತೆಯನ್ನು ಹಾಳಾದ ರಸ್ತೆಗಳು, ಪ್ರಮುಖ ರಸ್ತೆಗಳು, traffic density ಆಧಾರದ ಮೇಲೆ ಮಾಡಬೇಕೆಂದಿದೆ ಅದನ್ನು ಮಾಡುತ್ತೇವೆ.

ಶ್ರೀ ಸಿ ಎಸ್ ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ಸಿಆರ್ಎಫ್ ಅನ್ನು ಕೊಡುವಾಗ ಲೀಡರ್ಸ್ ಮುಖವನ್ನೇ ನೋಡಿ ಕೊಟ್ಟಿರುತ್ತಾರೆ. ನಮ್ಮ ರಾಜ್ಯದ 6 ಕೋಟಿ ಜನರಿಗೆ ಎಂದು ಕೊಟ್ಟಿಲ್ಲ. ರಾಜ್ಯ ಸರ್ಕಾರದವರು ಸಹ ಯಾರೋ ಮುಂದುಗಡೆ ಜೋರು ಮಾಡುವವರಿಗೆ ಕೊಟ್ಟು ಬಾಕಿಯವರಿಗೆಲ್ಲಾ ಸೊನ್ನೆ ಸುತ್ತುತ್ತಾರೆ. ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಈ ರೀತಿಯ

ಧೋರಣೆ ಅನುಸರಿಸುವುದು ಖಂಡಿತ ಒಳ್ಳೆಯದಲ್ಲ. ಯಾರೋ ಉಮೇಶ್‌ಕತ್ತಿಯವರು ಬಹಳ ಪ್ರಬಲರು ಎಂದರೆ, ಅವರ ಕ್ಷೇತ್ರಕ್ಕೆ ಬಂದು, ಆ ಪಾರ್ಟಿ ಈ ಪಾರ್ಟಿ ಅಲ್ಲ, ಎಲ್ಲಾ ಪಾರ್ಟಿಯ ಶಾಸಕರು ಮುಗ್ಧರು, ಅವರು ಕ್ಷೇತ್ರದಲ್ಲಿ ಗೆದ್ದು ಬರಬೇಕಾದರೆ ಅವರ ಕಷ್ಟ ಅವರಿಗೇ ಗೊತ್ತು.

ಶ್ರೀ ಉಮೇಶ್ ಕತ್ತಿ: ನೀವು ಈ ಹಿಂದೆ ಅದನ್ನೇ ಮಾಡಿದ್ದೀರಿ.

ಶ್ರೀ ಸಿ ಎಸ್ ಪುಟ್ಟೇಗೌಡ: ಅವರು ಆ ರೀತಿ ಮಾಡಿದರು ಎಂದು ನೀವು ಏಕೆ ಮಾಡುತ್ತೀರಿ? ಇಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಎಂಬುದಲ್ಲ. ಇಡೀ ರಾಜ್ಯಕ್ಕೆ ಕೊಟ್ಟಿರುವ ಸಿಆರ್‌ಎಫ್ ಹಂಚುವಾಗ ಯಾರೋ ನಾಲ್ಕು ಜನರ ಪಾಲಾಗಿದೆ. ರಾಜ್ಯ ಸರ್ಕಾರದಲ್ಲಿ ಉದಾಸಿಯವರು, ಯಡಿಯೂರಪ್ಪನವರು ಕೊಡುವಾಗ ಯಾರೋ ಮುಂದುಗಡೆ ಸಿದ್ಧರಾಮಯ್ಯನವರು ಜೋರು ಮಾಡುತ್ತಾರೆಂದು ಅವರಿಗೊಂದು ಫಂಡ್, ಜಯಚಂದ್ರರವರು ಮಾಡುತ್ತಾರೆಂದು ಅವರಿಗೊಂದು ಫಂಡ್, ರೇವಣ್ಣನವರು ಜೋರು ಮಾಡುತ್ತಾರೆಂದು ಅವರಿಗೊಂದು ಫಂಡ್ ಎಂದಾದರೆ ಹಿಂದೆ ಇರುವವರೆಲ್ಲಾ ಪಾಪದವರೇ? ನಮಗೆ ಇಲ್ಲಿ ಮಾತನಾಡಲೂ ನೀವು ಬಿಡುವುದಿಲ್ಲ. Front lineನಲ್ಲಿ ಲೀಡರ್ಸ್ ಎಂದು ನೀವು ಅವರೇ ಗುದ್ದಾಡಿಕೊಳ್ಳುತ್ತೀರಿ, ಬರುವ ಫಂಡ್ಸ್ ಎಲ್ಲವನ್ನೂ ನೀವೆ ಹಂಚಿಕೊಂಡರೆ ನಮ್ಮ ಊರಲ್ಲಿ ಆಶೋತ್ತರವನ್ನು ಇಟ್ಟುಕೊಂಡು ನಮ್ಮನ್ನು ಕಳುಹಿಸಿರುವವರು ಜನರು ಏನೆಂದುಕೊಳ್ಳುತ್ತಾರೆ. ಇದು ಗಂಭೀರವಾದ ವಿಚಾರ. ದಯಮಾಡಿ ಎಲ್ಲರನ್ನೂ ಪರಿಗಣನೆ ಮಾಡಿ, ಇರಲಿ, ನೀವು ನಾಯಕರಿದ್ದೀರಿ, ನಿಮ್ಮ ಪಕ್ಷ ಅಪರೂಪಕ್ಕೆ ಅಧಿಕಾರಕ್ಕೆ ಬಂದಿದೆ, ಮಾಡಿಕೊಳ್ಳಿ. ಆದರೆ, ಅತ್ಯಂತ ಕೊನೆಯಲ್ಲಿ ಮನೆಮಂದಿಯಲ್ಲಾ ಊಟ ಮಾಡಿದ ಮೇಲೆ ಕಸ ಗುಡಿಸಿದ ಹೆಣ್ಣುಮಗಳಿಗೆ ಸಂಜೆ ಕೈ ತೊಳೆದ ಮೇಲಾದರೂ ನೀವು ಊಟ ಮಾಡಿದೆಯಾ ತಾಯಿ ಎಂದು ಕೇಳಬೇಕಲ್ಲಾ? ಆ ನೀತಿ ಇರಬೇಕು ಯಡಿಯೂರಪ್ಪನವರಿಗೆ, ಉದಾಸಿಯವರಿಗೆ ಇದು ನನ್ನ ಅತ್ಯಂತ ಕಳಕಳಿಯ ಮನವಿ. ಈ ಕಡೆ ಜಯಚಂದ್ರರವರಿಗೆ ನಿಮ್ಮ ಲೀಡರ್‌ರವರಿಗೂ ಇದನ್ನು ಮನವರಿಕೆ ಮಾಡಿಯೆಂದು ಮನವಿ ಮಾಡುತ್ತೇನೆ. ಅವರರು ಆ ರೀತಿ ಮಾಡಿದ್ದಕ್ಕೆ ನಾವು ಈಗ ಈ ಕಡೆ ಬಂದು ಕುಳಿತಿರುವುದು. ಅವರು ಮಾಡಿದ ಕೆಲಸವನ್ನು ನೀವು ಏಕೆ ಮಾಡುತ್ತೀರಿ? ನೀವು ಹಿಂದಿನದ್ದನ್ನು ಉದಾಹರಣೆ ಕೊಡುವುದು ಬೇಡ. ರಾಜ್ಯದ ಜನರು

ಯಡಿಯೂರಪ್ಪನವರು ಏನೋ ನಿಭಾಯಿಸುತ್ತಾರೆಂದು ಅಧಿಕಾರ ಕೊಟ್ಟಿದ್ದಾರೆ. ನಿಭಾಯಿಸಲು ಆಗಲಿಲ್ಲವೆಂದರೆ ಏನು ಪ್ರಯೋಜನ ಹೀಗೆ ಬಂದರು ಹಾಗೆ ಹೋದರು ಎಂದು ಆಗುತ್ತದೆ.

ಶ್ರೀ ಬಿ ಎಸ್ ಯಡಿಯೂರಪ್ಪ (ಮುಖ್ಯಮಂತ್ರಿಯವರು): ಹಿಂದುಗಡೆ ಕುಳಿತಿರುವ ನಮ್ಮೆಲ್ಲಾ ಸದಸ್ಯರಿಗೇನು ತಾರತಮ್ಯವಾಗಿದೆ ಈ ಬಾರಿ ಅದನ್ನು ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ನಿಮ್ಮ ಜೊತೆ ಮಾತನಾಡಿ ಆ ರೀತ ಯಾವ ಕ್ಷೇತ್ರದಲ್ಲಿ ಹಿನ್ನಡೆಯಾಗಿದೆ ಅದನ್ನು ನಮ್ಮ allocation ನಲ್ಲಿ ಸರಿಪಡಿಸುವ ಪ್ರಯತ್ನ ಮಾಡುತ್ತೇವೆ.

ಮಂಡ್ಯ ಜಿಲ್ಲೆಯಲ್ಲಿ ರಸ್ತೆ ಅಭಿವೃದ್ಧಿ ಬಗ್ಗೆ

66(314) ಶ್ರೀ ಸುರೇಶ್ ಗೌಡ:(ನಾಗಮಂಗಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ 8 ವಿಧಾನಸಭಾ ಕ್ಷೇತ್ರಗಳಿಗೆ ಲೋಕೋಪಯೋಗಿ ಇಲಾಖೆಯ ಲೆಕ್ಕ ಶೀರ್ಷಿಕೆ 3054, 5054, 12ನೇ ಹಣಕಾಸು, ನಬಾಡ್, ಸಿ.ಆರ್.ಎಫ್ ಹಾಗೂ ಇತರೆ ಯೋಜನೆಯಡಿ ರಸ್ತೆ ಅಭಿವೃದ್ಧಿ, ಸೇತುವೆ ನಿರ್ಮಾಣಕ್ಕೆ 2008-09 ಹಾಗೂ 2009-10ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು (ವಿಧಾನಸಭಾ ಕ್ಷೇತ್ರವಾರು, ಲೆಕ್ಕ ಶೀರ್ಷಿಕೆವಾರು ಮಾಹಿತಿ ನೀಡುವುದು)?

ಆ) ಈ ಪೈಕಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಯಾಗಿರುವ ಅನುದಾನದಡಿ 8 ವಿಧಾನಸಭಾ ಕ್ಷೇತ್ರವಾರು ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು (ಟೆಂಡರ್ ಆಗದೇ ಇರುವ ಕಾಮಗಾರಿಗಳ ಪಟ್ಟಿ ಹಾಗೂ ಟೆಂಡರ್ ನಂತರ ಪ್ರತಿ ಕಾಮಗಾರಿಯ ಗುತ್ತಿಗೆ ಪಡೆದಿರುವ ಗುತ್ತಿಗೆದಾರರ ಹೆಸರಿನ ವಿವರ ನೀಡುವುದು)?

ಇ) ಈ ಕಾಮಗಾರಿಗಳಲ್ಲಿ ಯಾವ ಕಾಮಗಾರಿಗಳು ಪೂರ್ಣಗೊಂಡಿವೆ: ಉಳಿದ ಕಾಮಗಾರಿಗಳು ಎಷ್ಟು ದಿವಸದೊಳಗೆ ಪೂರ್ಣಗೊಳ್ಳಲಿದೆ (ವಿವರ ನೀಡುವುದು)?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):